131

# ಜಿಲ್ಲಾಧಿಕಾರಿಗಳ ನ್ಯಾಯಾಲಯ, ಕೋಲಾರ ಜಿಲ್ಲೆ, ಕೋಲಾರ

ದಿನಾಂಕ: 19/10/2016

ಪ್ರಕರಣ ಸಂಖ್ಯೆ: ಆರ್‌ಎ.79/2015-16

ಉಪಸ್ಥಿತರು: ಡಾ॥ ಕೆ.ವಿ.ತ್ರಿಲೋಕ್ ಚಂದ್ರ ಭಾ.ಆ.ಸೇ.,
ಜಿಲ್ಲಾಧಿಕಾರಿಗಳು,
ಕೋಲಾರ ಜಿಲ್ಲೆ.

| ಮೇಲ್ಮನವಿದಾರರು | ವಿರುದ್ಧ | ಎದುರುದಾರರು |
|---|---|---|
| 1. ಶ್ರೀಮತಿ ಈರಮ್ಮ<br>ಕೋಂ ವೆಂಕಟಪ್ಪ<br>ದೊಡ್ಡ ಶಿವಾರ ಗ್ರಾಮ<br>ಕಸಬಾ ಹೋಬಳಿ<br>ಮಾಲೂರು ತಾಲ್ಲೂಕು<br>(ಶ್ರೀ ಎಸ್.ಆರ್.ನಾಗೇಶ್<br>-ವಕೀಲರು ರವರಿಂದ) | | 1. ತಹಶೀಲ್ದಾರ್<br>ಮಾಲೂರು ತಾಲ್ಲೂಕು<br>2. ಶ್ರೀಮತಿ ಮುನಿಯಮ್ಮ<br>ಕೋಂ ಲೇಟ್ ನಾರಾಯಣಪ್ಪ<br>3. ಶ್ರೀಮತಿ ರಾಮಕ್ಕ<br>ಕೋಂ ಪಿ. ನಾರಾಯಣಪ್ಪ<br>4. ಶ್ರೀಮತಿ ಲಕ್ಷ್ಮಮ್ಮ<br>ಕೋಂ ಪಿಳ್ಳಪ್ಪ<br>-ಎಲ್ಲರೂ ವಾಸ<br>ದೊಡ್ಡ ಶಿವಾರ ಗ್ರಾಮ<br>ಕಸಬಾ ಹೋಬಳಿ<br>ಮಾಲೂರು ತಾಲ್ಲೂಕು<br>5. ಸಹಾಯಕ ಕಮೀಷನರ್,<br>ಕೋಲಾರ ಉಪವಿಭಾಗ.<br>(ಶ್ರೀ ಬಿ.ಆರ್.ರವೀಂದ್ರ<br>-ವಕೀಲರು ರವರಿಂದ) |

ವಿಷಯ: ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರ ಕ್ರಮಾಂಕ:ಆರ್.ಎ.167/2012-13 ದಿನಾಂಕ: 24/07/2015. ರ ಆದೇಶದ ವಿರುದ್ಧ ಸಲ್ಲಿಸಿರುವ ಮೇಲ್ಮನವಿ.

*****

**ಪ್ರಸ್ತಾವನೆ.**

ಈ ಮೇಲ್ಮನವಿ ಅರ್ಜಿಯನ್ನು ಕರ್ನಾಟಕ ಭೂ ಕಂದಾಯ ಅಧಿನಿಯಮ 1964 ರ ಕಲಂ 136 ಓದಲಾದ ಕಲಂ 50 ರಂತೆ ವಿಚಾರಣೆಗಾಗಿ ದಾಖಲಿಸಿಕೊಂಡಿದೆ.

**ಪ್ರಕರಣದ ಸಂಕ್ಷಿಪ್ತ ವಿವರ.**

ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಓಬಳಾಪುರ ಗ್ರಾಮದ ಸ.ನಂ. 20/1 ರಲ್ಲಿ 4-16 ಎಕರೆ ಪೈಕಿ 2-08 ಎಕರೆ ಜಮೀನಿಗೆ ಸಂಬಂದಿಸಿದ ಹಕ್ಕುದಾಖಲೆ ಕ್ರಮಾಂಕ ಎಂ.ಆರ್.82-2/00-01 ಮತ್ತು ಆರ್.ಆರ್.ಟಿ.(ಡಿ)07/09-10 ದಿನಾಂಕ 22/03/2010 ರ ಆದೇಶವನ್ನು ರದ್ದುಪಡಿಸಲು ಕೋರಿ ಮುನಿಯಮ್ಮ ಕೋಂ ಲೇಟ್ ನಾರಾಯಣಪ್ಪ ಹಾಗೂ ಇತರರು ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರಲ್ಲಿ ಮೇಲ್ಮನವಿ ಸಲ್ಲಿಸಿರುತ್ತಾರೆ. ವಿಚಾರಣೆ ನಂತರ ಸಹಾಯಕ ಕಮೀಷನರ್ ರವರು ಪ್ರಕರಣ ಸಂಖ್ಯೆ:ಆರ್‌ಎ.167/2012-13 ದಿನಾಂಕ: 24/07/2015 ರಂದು ಹೊರಡಿಸಿದ ಆದೇಶದಲ್ಲಿ ಮೇಲ್ಮನವಿಯನ್ನು ಪುರಸ್ಕರಿಸಿ ಪ್ರಶ್ನಿತ ಹಕ್ಕುದಾಖಲೆ ಕ್ರಮಾಂಕ ಎಂ.ಆರ್.82-2/00-01 ಮತ್ತು ಆರ್.ಆರ್.ಟಿ.(ಡಿ)07/09-10 ದಿನಾಂಕ 22/03/2010 ನ್ನು ರದ್ದುಪಡಿಸಿ ಸಿವಿಲ್ ನ್ಯಾಯಾಲಯದ ತೀರ್ಪಿನ ಸಂಖ್ಯೆ ಓ.ಎಸ್.152/1969 ರಂತೆ ನಿಯಮಾನುಸಾರ ಕ್ರಮ ಜರುಗಿಸಲು ತಹಶೀಲ್ದಾರ್, ಮಾಲೂರು ತಾಲ್ಲೂಕು ರವರಿಗೆ ಆದೇಶಿಸಿರುತ್ತಾರೆ. ಈ ಆದೇಶದಿಂದ ಬಾದಿತರಾದ ಮೇಲ್ಮನವಿದಾರರು ಈ ನ್ಯಾಯಾಲಯದಲ್ಲಿ ಪ್ರಸ್ತುತ ಮೇಲ್ಮನವಿಯನ್ನು ಸಲ್ಲಿಸಿರುತ್ತಾರೆ. ಸದರಿ ಅರ್ಜಿಯನ್ನು ವಿಚಾರಣೆಗಾಗಿ ದಾಖಲಿಸಿಕೊಂಡು ಉಭಯತ್ರರಿಗೂ ನೋಟೀಸು ನೀಡಲಾಯ್ತು.

...2

ಉಭಯತ್ರರು ನಿವೇದಿಸಿರುವ ಅಂಶಗಳನ್ನು ಪರಿಗಣಿಸಲಾಯ್ತು. ಕೆಳನ್ಯಾಯಾಲಯದ ಪ್ರಶ್ನಿತ ಆದೇಶ ಹಾಗೂ ದಾಖಲೆಗಳನ್ನು ಪರಿಶೀಲಿಸಲಾಗಿ, ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಓಬಳಾಪುರ ಗ್ರಾಮದ ವಿವಾದಿತ ಸರ್ವೆ ನಂ. 20/1 ರಲ್ಲಿನ 4-16 ಎಕರೆ ಜಮೀನು ಮೇಲ್ಮನವಿದಾರರ ಗಂಡ ವೆಂಕಟಪ್ಪ ಬಿನ್ ರಾಮಯ್ಯ ರವರ ಹೆಸರಿನಲ್ಲಿ ಇರುತ್ತದೆ. ಎದುರುದಾರರು ಸದರಿ ವೆಂಕಟಪ್ಪ ರವರ ವಿರುದ್ಧ ಮಾನ್ಯ ಮುನ್ಸಿಫ್ ನ್ಯಾಯಾಲಯ, ಕೆ.ಜಿ.ಎಫ್. ನಲ್ಲಿ ಭಾಗ ಕೋರಿ ದಾವೆ ಹೂಡಿರುತ್ತಾರೆ. ಮಾನ್ಯ ನ್ಯಾಯಾಲಯವು ಸಂಖ್ಯೆ ಓ.ಎಸ್.152/69 ರಂತೆ ಪ್ರಕರಣ ದಾಖಲಿಸಿಕೊಂಡು ವಿಚಾರಣೆ ನಂತರ ದಿನಾಂಕ 23/11/1972 ರಂದು **" The Suit is decreed with cost. The plaintiffs are declared that they are entitled to a half share in all the joint family properties detailed in the plaint schedule. There shall be a partition by metes and bounds of all the immovable properties. The Deputy Commissioner shall at the time of partition take into consideration the equities in the case and shall effect partion of the immovable properties without offending the provisions of the Prevention of Fragmentation Act, and shall allot half share to the plaintiffs. He shall also put the plaintiff in possession of such lands that may be allotted to the plaintiff's share.**
**xxxxxxx**
**Drawup preliminary decree accordingly."** ಎಂದು ಆದೇಶಿಸಿರುತ್ತಾರೆ.

ಗೌ॥ ಕರ್ನಾಟಕದ ಉಚ್ಚ ನ್ಯಾಯಾಲಯ, ಗುಲ್ಬರ್ಗ ಪೀಠ ರವರ ಪ್ರಕಟಿತ ತೀರ್ಪು ಸಂಖ್ಯೆ:ಡಬ್ಲ್ಯೂ.ಎ.50003-50005/2013(ಕೆ.ಎಲ್.ಆರ್-ಆರ್.ಆರ್) ರಲ್ಲಿ **" The facts are clear that the preliminary decree is passed declaring the rights of the of parties. What is the property, to which each of the shares actually entitled to, would be decided in final decree proceedings. Thereafter, they will be put in separate possession of the property so allotted. It is only then these persons can file an application before revenue authorities to mutate their name in respect to the properties allotted in final decree proceedings. ..................."** ಎಂದು ಆದೇಶಿಸಿರುತ್ತಾರೆ. ಈ ಪ್ರಕರಣದಲ್ಲಿಯೂ ಸಹ ಫೈನಲ್ ಡಿಕ್ರಿ ಪ್ರೊಸೀಡಿಂಗ್ಸ್ (FDP) ಆಗಿರುವ ಬಗ್ಗೆ ಎದುರುದಾರರು ಯಾವುದೇ ದಾಖಲೆಗಳನ್ನು ಹಾಜರು ಪಡಿಸಿರುವುದಿಲ್ಲ. ಆದ್ದರಿಂದ ಸಹಾಯಕ ಕಮೀಷನರ್ ರವರ ಪ್ರಶ್ನಿತ ಆದೇಶ ನ್ಯೂನ್ಯತೆಯಿಂದ (Suffers from infirmity) ಕೂಡಿದೆ.

## ಆದೇಶ

ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಿದೆ. ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರ ಪ್ರಶ್ನಿತ ಆದೇಶ ಕ್ರಮಾಂಕ: ಆರ್.ಎ.167/2012-13 ದಿನಾಂಕ:24/07/2015 ನ್ನು ರದ್ದುಪಡಿಸಿದೆ. ಎದುರುದಾರರು ಫೈನಲ್ ಡಿಕ್ರಿ ಪ್ರೊಸೀಡಿಂಗ್ಸ್ (FDP) ಆದ ನಂತರ ಖಾತೆ ಕೋರಲು ಸ್ವತಂತ್ರರು.

ಈ ಆದೇಶವನ್ನು ಶೀಘ್ರಲಿಪಿಗಾರರಿಗೆ ಉಕ್ತಲೇಖನ ನೀಡಿ, ಬೆರಳಚ್ಚು ಮಾಡಿಸಿ ಪರಿಷ್ಕರಿಸಿದೆ. ನಂತರ ದಿನಾಂಕ: 19/10/2016 ರಂದು ಮುಕ್ತ ನ್ಯಾಯಾಲಯದಲ್ಲಿ ಘೋಷಿಸಿದೆ.

K. V. Trilokchandra

ಜಿಲ್ಲಾಧಿಕಾರಿಗಳು
ಕೋಲಾರ ಜಿಲ್ಲೆ

ದಿನಾಂಕ:09/03/2016 ರಂದು ಪ್ರಕರಣವನ್ನು ವಿಚಾರಣೆಗೆ ತೆಗೆದುಕೊಂಡಾಗ ಮೇಲ್ಮನವಿದಾರರು ಹಾಜರು. 2 ರಿಂದ 4ನೇ ಎದುರುದಾರರ ಪರ ವಕೀಲರು ವಕಾಲತ್ ಹಾಗೂ ಲಿಖಿತ ಆಕ್ಷೇಪಣೆ ಸಲ್ಲಿಸಿದರು. ದಿನಾಂಕ:27/07/2016 ರಂದು ಉಭಯತ್ರರ ವಕೀಲರುಗಳು ಹಾಜರು. ಉಭಯತ್ರರ ಕೋರಿಕೆಯ ಮೇರೆಗೆ ಪ್ರಕರಣವನ್ನು ಆದೇಶಕ್ಕಾಗಿ ಕಾದಿರಿಸಲಾಯ್ತು.

ಮೇಲ್ಮನವಿದಾರರ ವಕೀಲರು ಸಲ್ಲಿಸಿರುವ ಮೇಲ್ಮನವಿ ಹಾಗೂ ಮಂಡಿಸಿದ ವಾದದಲ್ಲಿ ಮೇಲ್ಮನವಿದಾರರ ಗಂಡ ವೆಂಕಟಪ್ಪ ಹಾಗೂ 2ನೇ ಎದುರುದಾರರ ಗಂಡ ನಾರಾಯಣಪ್ಪ ರವರು ಅಣ್ಣ ತಮ್ಮಂದಿರಾಗಿರುತ್ತಾರೆ. ಇವರಿಗೆ ಪಿತ್ರಾರ್ಜಿತವಾಗಿ ಬಂದ ಎಲ್ಲಾ ಜಮೀನುಗಳನ್ನು ಎದುರುದಾರರು ಮೇಲ್ಮನವಿದಾರರ ಗಂಡ ವೆಂಕಟಪ್ಪ ವಿರುದ್ಧ ಮಾನ್ಯ ಸಿವಿಲ್ ನ್ಯಾಯಾಲಯ, ಕೆ.ಜಿ.ಎಫ್. ನಲ್ಲಿ ವಿಭಾಗದ ದಾವೆ ಹೂಡಿ ವಿವಾದಿತ ಜಮೀನು ಹಾಗೂ ಇತರೆ ಜಮೀನುಗಳಲ್ಲಿ ತಲಾ ಅರ್ದ ಭಾಗದಂತೆ ಇತ್ಯರ್ಥ ಮಾಡಿಕೊಂಡು ನಂತರ ಮಾಲೂರು ತಾಲ್ಲೂಕು, ಕಸಬಾ ಹೋಬಳಿ, ಓಬಳಾಪುರ ಗ್ರಾಮದ ವಿವಾದಿತ ಸರ್ವೆ ನಂ. 20/1 ರಲ್ಲಿನ 4-16 ಎಕರೆ ಜಮೀನು ತಮ್ಮ ವಾಸ ಸ್ಥಳ ದೊಡ್ಡಶಿವಾರ ದಿಂದ ದೂರ ಇರುವುದರಿಂದ ಮೇಲ್ಮನವಿದಾರರಿಗೆ ಬಿಟ್ಟುಕೊಡಲು ಒಪ್ಪಂದ ಮಾಡಿಕೊಂಡಿರುತ್ತಾರೆ. ಅದರಂತೆ ವೆಂಕಟಪ್ಪ ರವರು ಸದರಿ ಜಮೀನಿನಲ್ಲಿ ಅನುಭವ ಮುಂದುವರಿಸಿಕೊಂಡು ಇವರ ಪವತಿ ನಂತರ ಮೇಲ್ಮನವಿದಾರರು ಎಂ.ಆರ್.82-2/2000-01 ರಂತೆ ಪವತಿವಾರಸ್ಸು ಮೂಲಕ ಖಾತೆ ಮಾಡಿಸಿಕೊಂಡಿರುತ್ತಾರೆ ಎಂದು ತಿಳಿಸಿರುತ್ತಾರೆ. ಹೀಗಿರುವಾಗ ಎದುರುದಾರರು ತಹಶೀಲ್ದಾರ್, ಮಾಲೂರು ತಾಲ್ಲೂಕು ರವರಲ್ಲಿ ಮಾನ್ಯ ಸಿವಿಲ್ ನ್ಯಾಯಾಲಯ, ಕೆ.ಜಿ.ಎಫ್. ರವರ ತೀರ್ಪು ಸಂಖ್ಯೆ ಓ.ಎಸ್.152/69 ರಂತೆ ಖಾತೆ ಕೋರಿ ಅರ್ಜಿ ಸಲ್ಲಿಸಿರುತ್ತಾರೆ. ತಹಶೀಲ್ದಾರ್ ರವರು ಸದರಿ ಅರ್ಜಿಯನ್ನು ತಿರಸ್ಕರಿಸಿರುತ್ತಾರೆ ಎಂದು ವಾದಿಸಿರುತ್ತಾರೆ. ಎದುರುದಾರರು ವಿವಾದಿತ ಜಮೀನಿನ ಹಕ್ಕು ಕೋರಿ ಮಾನ್ಯ ಸಿವಿಲ್ ನ್ಯಾಯಾಲಯ, ಮಾಲೂರು ನಲ್ಲಿ ಓ.ಎಸ್.131/2009 ರಂತೆ ದಾವೆ ಹೂಡಿದ್ದು, ಇನ್ನೂ ಬಾಕಿ ಇರುತ್ತದೆ ಎಂದು ವಾದಿಸಿರುತ್ತಾರೆ. ಮಾನ್ಯ ಕರ್ನಾಟಕ ಉಚ್ಚ ನ್ಯಾಯಾಲಯ, ಗುಲ್ಬರ್ಗ ಪೀಠ ರವರ ತೀರ್ಪು ಸಂಖ್ಯೆ ಡಬ್ಲ್ಯೂ.ಎ.50003-50005/2013 (ಕೆ.ಎಲ್.ಆರ್.-ಆರ್.ಆರ್.) ನ್ನು ಉಲ್ಲೇಖಿಸಿ, ಈ ಎಲ್ಲಾ ಅಂಶಗಳನ್ನು ಪರಿಗಣಿಸದೆ ಮಾಡಿರುವ ಸಹಾಯಕ ಕಮೀಷನರ್, ಕೋಲಾರ ಉಪವಿಭಾಗ ರವರ ಪ್ರಶ್ನಿತ ಆದೇಶವನ್ನು ರದ್ದುಪಡಿಸುವ ಮೂಲಕ ತಮ್ಮ ಮೇಲ್ಮನವಿ ಅರ್ಜಿಯನ್ನು ಪುರಸ್ಕರಿಸಲು ಕೋರಿರುತ್ತಾರೆ.

2 ರಿಂದ 4ನೇ ಎದುರುದಾರರು ಸಲ್ಲಿಸಿರುವ ಲಿಖಿತ ವಾದ ಹಾಗೂ ಆಕ್ಷೇಪಣೆಯಲ್ಲಿ 2ನೇ ಎದುರುದಾರರ ಗಂಡ ನಾರಾಯಣಪ್ಪ ಹಾಗೂ ಮೇಲ್ಮನವಿದಾರರ ಗಂಡ ವೆಂಕಟಪ್ಪ ರವರು ಅಣ್ಣ ತಮ್ಮಂದಿರಾಗಿರುತ್ತಾರೆ. ನಾರಾಯಣಪ್ಪ ರವರ ಪವತಿ ನಂತರ ಎದುರುದಾರರು ಪಿತ್ರಾರ್ಜಿತವಾಗಿ ಬಂದ ಎಲ್ಲಾ ಜಮೀನುಗಳಲ್ಲಿ ಭಾಗ ಕೋರಿ ಮೇಲ್ಮನವಿದಾರರ ಗಂಡ ವೆಂಕಟಪ್ಪ ವಿರುದ್ಧ ಮಾನ್ಯ ಸಿವಿಲ್ ನ್ಯಾಯಾಲಯ, ಕೆ.ಜಿ.ಎಫ್. ನಲ್ಲಿ ಓ.ಎಸ್.152/1969 ರಂತೆ ದಾವೆ ಹೂಡಲಾಗಿ, ಮಾನ್ಯ ನ್ಯಾಯಾಲಯವು ದಿನಾಂಕ 23/11/1972 ರಂದು ಓಬಳಾಪುರ ಗ್ರಾಮದ ವಿವಾದಿತ ಸರ್ವೆ ನಂ. 20/1 ರಲ್ಲಿನ 4-16 ಎಕರೆ ಜಮೀನು ಹಾಗೂ ಇತರೆ ಜಮೀನುಗಳಲ್ಲಿ ತಲಾ ಅರ್ಧ ಭಾಗದಂತೆ ಇತ್ಯರ್ಥಪಸಿ, ಜಿಲ್ಲಾಧಿಕಾರಿಗಳಿಗೆ ವಿಭಾಗವನ್ನು ಕಾರ್ಯರೂಪಕ್ಕೆ ತರಲು ಆದೇಶಿಸಿರುತ್ತೆ. ಜಿಲ್ಲಾಧಿಕಾರಿಗಳ ಆದೇಶದ ಮೇರೆಗೆ ತಹಶೀಲ್ದಾರ್, ಮಾಲೂರು ತಾಲ್ಲೂಕು ರವರು ವಿವಾದಿತ ಜಮೀನನ್ನು ಹೊರತುಪಡಿಸಿ ಉಳಿದ ಜಮೀನುಗಳ ಖಾತೆಯನ್ನು, ಎಂ.ಅರ್.51 ರಂತೆ ಖಾತೆ ಮಾಡಿರುತ್ತಾರೆ. ಹೀಗಿರುವಾಗ ಮೇಲ್ಮನವಿದಾರರು ವಿವಾದಿತ ಪೂರ ಜಮೀನನ್ನು ತಮ್ಮ ಹೆಸರಿಗೆ ಪವತಿವಾರಸ್ಸು ಮೂಲಕ ಖಾತೆ ಮಾಡಿಸಿಕೊಂಡಿರುವುದು ಕಾನೂನು ಬಾಹಿರವಾಗಿರುತ್ತದೆ ಎಂದು ವಾದಿಸಿರುತ್ತಾರೆ. ನಂತರ ತಹಶೀಲ್ದಾರ್, ಮಾಲೂರು ತಾಲ್ಲೂಕು ರವರು ಮಾನ್ಯ ಸಿವಿಲ್ ನ್ಯಾಯಾಲಯ, ಕೆ.ಜಿ.ಎಫ್. ರವರ ಆದೇಶ ಸಂಖ್ಯೆ ಓ.ಎಸ್.152/1969 ರಂತೆ ಖಾತೆ ಮಾಡದಿರುವುದು ಸಹ ಕಾನೂನು ಬಾಹಿರವಾಗಿರುತ್ತದೆ. ಈ ಎಲ್ಲಾ ಅಂಶಗಳನ್ನು ಪರಿಶೀಲಿಸಿ ಮಾಡಿರುವ ಪ್ರಶ್ನಿತ ಆದೇಶ ಕ್ರಮಬದ್ಧವಾಗಿದೆ ಎಂದು ವಾದಿಸಿ ಮೇಲ್ಮನವಿ ಅರ್ಜಿಯನ್ನು ವಜಾಗೊಳಿಸಬೇಕೆಂದು ಕೋರಿರುತ್ತಾರೆ.

...3